

‘ಯಾವನಲ ಅವನು ಚಪ್ಪಲಿ ತಗೊಂಡ್ ಹೊಡೆದು ಜಾತಿ ಕುಲ ಕೆಡುಸ್ತೀನಿ ಅಂದವನು, ಥು ಬೆವರ್ಸಿ ನನ ಮಗನೇ, ಸಾಲ ಕೊಟ್ಟಿದ್ದೀನಿ ಅಂತ ಜಾತಿ ಬಗ್ಗೆ ಮಾತಾಡೋ ಸದರ ಏನೋ ಗಿರೇಸ್ತಾ. ನೀನೊಂದು ನಾನೊಂದ್ ಜಾತಿ ಅಷ್ಟೇ ಇರೋದು?’ ಎಂದು ರಣಚಂಡಿಯಾದಳು. ಗೌಡನ ಆಳುಗಳು ಬೆರಗಾದರು. ಆಕೆಯ ಜನಪದ ಬೈಗುಳಕ್ಕೆ ಬಂದ ಆಳುಗಳ ಬಾಯಿಯಲ್ಲಿ ಮಾತು ಬರಿದಾದವು. ಬೆಪ್ಪುತಕ್ಕಡಿಯಂತಾದ ಆಳುಗಳು ಅಂಗೇ ಹಿಂಗೆ ಅಂತನ್ನುತ್ತಾ ಅಲ್ಲಿಂದ ಕಾಲ್ಕಿತ್ತರು.

ಅಸಲಿಗೆ ಬೇತಾಳಿ ಎಂಬ ಮಾನವಜೀವಿಯು ಆ ಊರಿಗೆ ತುಂಬಾ ಪುರಾತನನಾಗಿದ್ದನು. ಜೊತೆಗೆ ಬಹು ಜಿಪುಣಗ್ರೇಸರ ಆಗಿದ್ದನು. ಮರುಬಳಕೆಯ ಕೌಶಲ್ಯವನ್ನು ಚೆನ್ನಾಗಿ ಬಲ್ಲವನಾಗಿದ್ದನು. ವಿಶೇಷವಾಗಿ ತನ್ನ ಹಳೆ ಎಕ್ಕಡಕ್ಕೆ ಸುದ್ದಿಯಾಗಿದ್ದ. ಚಪ್ಪಲಿ ಸವೆದರೂ ಹೊಸದನ್ನು ಕೊಂಡುಕೊಳ್ಳುತ್ತಿರಲಿಲ್ಲ. ಅವನಿಗೆ ಹೊಸದು ಎನ್ನುವುದು ಬೇಡವಾಗಿತ್ತು. ಹೇಗೋ ಹಳೆಯದರ ಜೊತೆ ಹೊಸದು ಸೇರುವ ‘ಕೌದಿ’ಯಂತೆ ಬಳಸುತ್ತಿದ್ದನು. ಅಲ್ಲ ‘ಸವೆದ ಸೋಪನ್ನು ಹೊಸ ಸೋಪಿಗೆ ಅಂಟಿಸುವಂತೆ’ ಮರು ರೂಪಿಸಿಕೊಳ್ಳುತ್ತಿದ್ದನು. ಅವನೋ ಎತ್ತರದ ಕಡ್ಡಿಯಂತಹ ಆಳು. ಯಾವುದೋ ಕಾಲದಲ್ಲಿ ತೆಗೆದುಕೊಂಡ ಒಂದು ಜೊತೆ ಚಪ್ಪಲಿಯಲ್ಲೇ ಕಾಲ ತಳ್ಳುತ್ತಿದ್ದ. ಅವುಗಳನ್ನು ತೆಗೆದುಕೊಂಡು ಬಹಳ ವರುಷವೇ ಕಳೆದಿತ್ತು ಎಂಬುದು ನೋಡಿದವರಿಗೆ ಗೊತ್ತಾಗಿಬಿಡುತ್ತಿತ್ತು. ಉಂಗುಷ್ಟ, ಅದರ ಕೊಳೆ, ಎಲ್ಲವೂ ಸೂಚನೆಯಂತಿದ್ದವು. ಆದರೂ ಮೇಲ್ನೋಟಕ್ಕೆ ಬಾಳಿಕೆ ಎಂಬುದು ನಾವು ಬಳಸಿದ ಹಾಗೆ ಎನ್ನುವಂತೆ ಕಾಪಾಡಿಕೊಂಡಿದ್ದ. ಅಪ್ಪಿ ತಪ್ಪಿ ಎಲ್ಲಾದರೂ ಕಳೆದರೆ ಮತ್ತೆ ಸಿಗಲಿ ಎಂದು ಚಪ್ಪಲಿ ಮುಂದಿನ ತುದಿಯಲ್ಲಿ ಗುರುತು ಮಾಡಿಟ್ಟುಕೊಂಡಿದ್ದ. ಉಂಗುಷ್ಟ ಕಿತ್ತೋದರೆ ಹೊಲಿಗೆ ಹಾಕಿಸುತ್ತಿದ್ದ ಅಥವಾ ಮೊಳೆ ಒಡೆಸುತ್ತಿದ್ದ. ‘ಅಟ್ಟೆ’ ಸವೆದರೆ ಮಂದವಾದ ಟೈರ್ ಅನ್ನು ಹೊಲಿಸುತ್ತಿದ್ದ. ಹೊಲಿಸಿ ಹೊಲಿಸಿ ಎಲ್ಲೂ ಜಾಗವಿಲ್ಲದೆ ಹೊಲಿಯುವ ಚಮ್ಮಾರನಿಗೂ ತ್ರಾಸವಾಗುತ್ತಿತ್ತು. ಮತ್ತೆ ಬಂದರೆ ಎಲ್ಲಿ ಹೊಲಿಗೆಗೆ ಹಾಕುವುದು ಎಂದು ಮುಂಚಿತವಾಗಿಯೇ ಯೋಚಿಸುತ್ತಿದ್ದ. ಒಟ್ಟಿನಲ್ಲಿ ‘ಬೂತಯ್ಯನ ಮಗ ಅಯ್ಯು’ ಸಿನಿಮಾದಲ್ಲಿ ಲೋಕನಾಥ್ ಹತ್ತಿರ ಬಂದು ಎಂ.ಪಿ ಶಂಕರ್ ಕೇಳಿದಂತೆ ನೆನಪಾದರೆ ಸಾಕು.

ಈ ಚಪ್ಪಲಿ ಪುರಾಣಕ್ಕೆ ದೊಡ್ಡ ಇತಿಹಾಸವೇ ಇದೆ. ಕಾಡಿನಿಂದ ಬಂದ ಆದಿಮಾನವ ಕಾಲಿಗೆ ಏನೂ ತಾಕದಂತೆ, ಕಲ್ಲುಮುಳ್ಳುಗಳಿಂದ ರಕ್ಷಣೆ ಪಡೆಯಲು ಮೊದಲು ಮರದ ತೊಗಟೆಗಳಿಂದ, ಸೊಪ್ಪುಗಳಿಂದ, ರಕ್ಷಿಸಿಕೊಳ್ಳಲಿಕ್ಕೆ ಕಂಡುಕೊಂಡ ಉಪಾಯಗಳಲ್ಲಿ ಚಪ್ಪಲಿಯೂ ಒಂದು. ಋಷಿ ಮುನಿಗಳ ಕಾಲಕ್ಕೆ ಮರದ ಪಟ್ಟಿಗಳನ್ನು ಕಾಲಿಗೆ ಸಿಕ್ಕಿಸಿಕೊಂಡು ಕಾಡು ಮೇಡುಗಳನ್ನು ಸುತ್ತಾಡುತ್ತಿದ್ದರಂತೆ. ದನ, ಎಮ್ಮೆ ಚರ್ಮವನ್ನು ಹದ ಮಾಡಿ ಗಲ್ಲೇಬಾನಿಯಲ್ಲಿ ಕೊಳೆಯಾಕಿ ಬೊಂಬೆ ತಿದ್ದಿದಂತೆ ತಿದ್ದುವ ಕೌಶಲ್ಯ ತುಂಬಾ ಹಳೆಯದು. ಮನೆಯಲ್ಲಿ ಸಾಕಿದ ಎಮ್ಮೆ, ಎತ್ತು, ದನಗಳು ಸತ್ತರೆ ಅದರ ಚರ್ಮವನ್ನು ಸುಲಿದು ಒಣಗಿಸಿ ಒಂದು ಹದಕ್ಕೆ ತರುವ ಕಸುಬು ತುಂಬಾ ಪ್ರಾಚೀನ ಕಾಲದಿಂದ ಲಭಿಸಿದೆ. ಇದು ಒಂದು ರೀತಿಯಾದರೆ, ಈಗಲೂ ಸನ್ಯಾಸಿಗಳು ಮರದ ಚಪ್ಪಲಿ ಧರಿಸುವುದು ನೋಡಿರಬಹುದು! ಹಿಂಸೆಯಿಂದ ದೂರವಿರುವ ಅವರುಗಳು ‘ಮೆಟ್ಟು’ಗಳನ್ನು ಬಹಳ ದೂರ ಮೆಟ್ಟಿಕೊಂಡು ನಡೆಯುವ ಉದಾಹರಣೆ ಕಡಿಮೆ!

ನನ್ನ ಕಾಲು ಚಪ್ಪಲಿ ಭಾಗ್ಯ ಕಂಡದ್ದು ಹೈಸ್ಕೂಲ್ ಹತ್ತಿದ ಮೇಲೆಯೇ. ಅಪ್ಪ ಚಪ್ಪಲಿ ತೆಗೆದುಕೊಡುವಷ್ಟು ಉದಾರಿಯಾಗಿರಲಿಲ್ಲ. ಚಪ್ಪಲಿ ಇಲ್ಲದೆ ಬರಿಗಾಲಲ್ಲಿ ನಡೆಯುತ್ತಾ ಬೇಸಿಗೆಯಲ್ಲಿ ಒಣಗಿದ ಕೆರೆಯಂತೆ ಕಾಲು ಕಾಣುತ್ತಿತ್ತು. ಆಗೊಮ್ಮೆ ಈಗೊಮ್ಮೆ ದಪ್ಪ ಚರ್ಮದ ದಪ್ಪ ‘ಅಟ್ಟೆ’ ಇರುವುದನ್ನು ನೋಡಿ ಕಟ್ಟಿಸಿಕೊಳ್ಳುತ್ತಿದ್ದ. ಆಗ ಎಲ್ಲರೂ ಚರ್ಮ ಹದ ಮಾಡುವವನನ್ನು ಹುಡುಕಿ ಗಟ್ಟಿಯಾದ ಬಿಗಿಯಾದ ಚರ್ಮದ ಚಪ್ಪಲಿ ಹೊಲಿಸಿಕೊಳ್ಳುತ್ತಿದ್ದರು. ಕೆಲವು ವರ್ಷಗಳಾದ ಮೇಲೆ ತನ್ನ ತಮ್ಮ ಬಳಸಿ ಹಳೆಯದಾದ ಕಂಪನಿ ಚಪ್ಪಲಿಗಳನ್ನು ಕೊಟ್ಟರೆ ತೀರ್ಥದಂತೆ ಸ್ವೀಕರಿಸಿ ಬಳಸುತ್ತಿದ್ದ. ಹಾಗಾಗಿಯೇ ‘ನನಗೆ ತಡಕ್ಕಿಟ್ಟು ನಿನಗೆಲ್ಲಿ ತರಲಿ ಮಡಕೆ ಹಿಟ್ಟು’ ಎನ್ನುವಂತೆ ಅಪ್ಪನಿಗೆ ದಕ್ಕದಿದ್ದಾಗ ನನಗೂ ಹೊಸ ಚಪ್ಪಲಿ ಕೊಡಿಸಲು ತುಂಬಾ ವರ್ಷಗಳೇ ಕಳೆದಿದ್ದವು.